Sri T. MARIAPPA.—I beg to move.

"That the Mysore Sales-tax (Second Amendment) Bill, 1961, be passed."

Mr. DEPUTY SPEAKER.—The question is:

"That the Mysore Sales-tax (Second Amendment) Bill, 1961, be passed."

The motion was adopted

MYSORE LAND REVENUE SURCHARGE BILL, 1961.

Motion to consider

Sri KADIDAL MANJAPPA (Minister for Revenue).—I beg to move.

"That the Mysore Land Revenue Surcharge Bill, 1961, be taken into consideration."

Mr. DEPUTY SPEAKER.—Motion moved:

"That the Mysore Land Revenue Surcharge Bill, 1961, be taken into consideration."

†Sri KADIDAL MANJAPPA.—Sir, it has become very necessary to find money to finance the Third Five Year Plan. The Planning Commission as well as the other authorities at Delhi are finding fault with us for not augmenting our internal resources. In fact the Finance Enquiry Committee found fault with us for not increasing the land revenue. In this State a major portion of resettlement is overdue. Except in South Kanara District and 3 talukas of Raichur District of Gangavathi, Raichur and Devadurg, in the rest of the area resettlement is overdue. In some cases it may be 40 years and in some it may be more than 50 years. With regard to other taxcs their rates have been enhanced from time to time. For instance in the case of sales tax the rates have been changed often. So also in the case of the rates of motcr vchicles tax, but land revenue, the rates remain unchanged for a number of years, as I submitted earlier, for more than half a century in some cases. The prices of agricultural commodities have gone up very high, sometimes 50%, sometimes 100% and sometimes one hundred times even. Therefore it is reasonable that we should take steps to tax the agricultural sector to some extent, not unreasonably. The process of resettlement is very slow in the very nature of things. The area has to be divided into zones and each zone has to be divided into groups on the basis of the climatic conditions, rainfall, etc. and a detailed economic survey has to be conducted. Thereafter crop-cutting experiment has to be undertaken and report sent to the Government and Government has to lay down the principles on which resettlement has to take place. Those principles will have to be incorporated by means of legislation. All this process takes a long time. We commenced the work in the year 1956-57, but on account of States reorganisation and other difficulties the work could not be completed. At present the work is going on very

briskly. Even with this speed it may take about 5 years before resettlement is completed and new settlement rates are enforced. In some neighbouring States a surcharge is being levied on land revenue. In our own State, in the Madras area there are two kinds of surcharges. One is the surcharge levied at a flat rate of Annas 2 in the rupee and another at a slab rate. In the Hyderabad area special assessment is being levied at the rate of Annas 2 per rupee. Therefore Government thought it desirable to levy a surcharge on land revenue. They have also thought it desirable to exempt the smaller holders who pay land revenue below Rs. 20. Therefore provision has been made in the Bill to exempt pesons who pay land revenue below Rs. 20. It is proposed to levy an ordinary surcharge not exceeding 15 nP. per rupee and a temporary surcharge at the rate of 20 nP. per rupee in areas where resettlement is overdue. This temporary surcharge will abate after resettlement is completed and new rates are brought into force.

Sri C. J. MUCKANNAPPA.—What will be the total receipt ?

Sri KADIDAL MANJAPPA.—We expect to get between Rs. 1 crore and Rs. 1½ crores. Our friends on the other side are likely to find fault with Government for trying to tax people in the rural areas particular agriculturists, but as I submitted earlier, the rate of land revenue has not been changed for over half a century.

12.00 NOON.

Secondly, we are carrying on a number of developmental activities in the rural areas. This year we have spent Rs. 2 crores for expanding rural communications and we have taken up the programme of sinking 15,000 irrigation wells in rural areas. There is demand for starting new schools, not only primary schools but also high schools in rural areas. Therefore, when people expect Government to come to their aid and give them more facilities it is but right that they should be prepared to pay for the amenities they expect Government to give After all, the surcharge is not more than 35 per cent of the amount payable. It is a reasonable levy. Further, as I submitted earlier, the temporary surcharge mentioned in sub-clause (*b*) of clause 3 will abate as soon as permanent settlement is completed. Further, submit that the surcharges that are levied in the Madras area and the special assessment levied in Hyderabad area will abate as soon this law comes into effect. Those enactments under which surcharges in the Madras area and the special assessent in the Hyderabad area are being levied will stand repealed.

Sri M. C. NARASIMHAN.—Those surcharges in Madras area, will they not continue?

Sri KADIDAL MANJAPPA.—In place of those surcharges, the new surcharge will come into effect-15 per cent in South Kanara District. This will not hit hard the small holders. They perhaps own up to 10 acres in some cases and up to 20 acres in other cases, because dry assessment in some cases is only 4 As. If calculated at this rate, it means more

than Rs. 20 crores or even Rs. 50 crores. Therefore, small holders are not affected by this levy. Some of my friends may find fault with the Government for not proposing to levy surcharge at a slab rate. Thinking that Government are going to enact land reforms, many agriculturists have partitioned their properties. Therefore, the levy at a slab rate will not yield much income and it will not really help those who deserve to secure help at the hands of Government. This exemption of holdings in respect of which below 20 is levied will give relief to the poorer section of agriculturists.

In Districts where people are subjected to frequent famine conditions, it will be a great relief. In fact, in South Kanara 2 or 3 acres will be exempted from this levy. Under these circumstances, it is a reasonable levy. I commend this measure for the kind consideration of this House.

Sri K. KENCHAPPA.—In Bombay area whatever may be the condition, the surcharge is avoided. Is there any basis ?

Sri KADIDAL MANJAPPA.—There is no proposal to exempt the entire Bombay area from the levy of surcharge.

I am sorry I have forgotton to mention it. In Bombay area, there are areas which are merged areas where settlement has not taken place under the law in force and so also in Hyderabad there are certain areas which are known as Paigas or Jahagir areas where the assessment is very high. In respect of those areas, the Government reduced the assessment up to 25 per cent. But even in spite of the reduction, the two rates prevailing in paiga and merged territories are higher than the rates prevailing in adjoining Government villages. Therefore, it is proposed that such areas where the rates prevailing are higher than in the adjoining Government villages should be exempted from the levy of surcharge. Similarly, where the water rate payable per acre exceeds Rs. 15 such lands or such water rate should be exempted from the levy of surcharge. It is not all areas in Belgaum District that will be exempted from the operation of this law.

†ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಸ್ವಾಮಿ, ಜಮೀನು ಕಂದಾಯದ ಮೇಲ್ತೆರಿಗೆ ಎಂದು ಕರೆದುಕೊಂಡಿರುವ ಈ ಮಸೂದೆಯನ್ನು ವಿರೋಧ ಮಾಡುವುದಕ್ಕೆ ನಿಂತಿದ್ದೇನೆ. ಮುಖ್ಯವಾಗಿ ಈ ಮಸೂದೆಯಲ್ಲಿ Surcharge ಎನ್ನುವುದನ್ನು ಜಮೀನು ಕಂದಾಯದ ಮೇಲೆ ಹೇರಿದ್ದಾರೆ. ಜಮೀನು ಕಂದಾಯವೆನ್ನುವುದನ್ನು ಇಂಗ್ಲಿಷ್ ಪದವನ್ನು ಉಪಯೋಗಿಸುವುದಾದರೆ, assessment ಎಂದು ಕರೆಯಬಹುದು. ಇದು tax levy ಅಥವಾ duty ಎಂಬುದರಲ್ಲಿ ಯಾವುದು, ಏನು ಎಂದು ಹೇಳುವುದಕ್ಕಾಗುವುದಿಲ್ಲ. ಕಂದಾಯ ಬಹುಕಾಲದಿಂದ ಸಮಾಜದಲ್ಲಿ ಜಾರಿಯಲ್ಲಿದೆ. Tax ಎನ್ನತಕ್ಕ ರೂಪವಾಗಿಯೋ, ಅಥವಾ assessment ಎನ್ನತಕ್ಕ ರೂಪವಾಗಿಯೋ ಎನ್ನುವುದನ್ನು ಯಾವ ಕಾನೂನಲ್ಲಿಯೂ ಮೊದಲಿನಲಾಗಾಯ್ತು ನಿಗದಿಮಾಡಿಲ್ಲ. ಈಗ ನಮ್ಮ ಹಿಂದೂಸ್ಥಾನದ ಶಾಸನದ ಪ್ರಕಾರ ಯಾವುದನ್ನು tax ಅಥವಾ ಕರ ಎಂದು ಜನರ ಮೇಲೆ ಹಾಕಬೇಕಾದರೂ ಸಹ ಅದರ ದರವನ್ನು ಕಾನೂನು ರೀತ್ಯ ನಿಗದಿಮಾಡದೆ ಹೋದರೆ ಅದು ಸರಿಹೋಗುವುದಿಲ್ಲ. ಅದನ್ನು ಅವಲಂಬಿಸುವುದು ಕಾನೂನು ಬದ್ಧವಾಗುವುದಿಲ್ಲವೆನ್ನುವ article ಇದೆ. ಮತ್ತು ನಮ್ಮ ಹಿಂದೂಸ್ತಾನದ ರಾಜ್ಯಾಂಗದ

246ನೇ ಆರ್ಟಿಕಲ್ ಮತ್ತೊಂದು ವಿಚಾರವನ್ನೂ ಒಳಗೊಂಡಿದೆ. ಅದೇನೆಂದರೆ ಯಾವುದಾದರೂ ಒಂದು ಸಂಸ್ಥಾನ, ಅಥವಾ ರಾಜ್ಯ ಶಾಸನ ಸಭೆ ಏನಾದರೂ ಒಂದು ಕರವನ್ನು ಅಥವಾ ಒಂದು ತೆರಿಗೆಯನ್ನೂ ನಿಗದಿಮಾಡಬೇಕಾದರೆ, ಅದರ ಮೊತ್ತವನ್ನು ನಿಗದಿಮಾಡಬೇಕಾದರೆ, ಅದು ಏಳನೆಯ ಷೆಡ್ಯೂಲಿನ ಎರಡನೆಯ ಪಟ್ಟಿಯಲ್ಲಿ ಯಾವುದಾದರೂ ಒಂದು ಭಾಗದಲ್ಲಿ ಬರಬೇಕು. ಇದನ್ನು ನಾನು ತುಂಬಾ ಆಲೋಚನೆಮಾಡಿನೋಡಿದೆ. ಈ ಪಟ್ಟಿಯಲ್ಲಿ ಅಂಥಾದ್ದು ಯಾವುದೂ ಇಲ್ಲ. ಆದುದರಿಂದಲೇ ನಮ್ಮ ಸನ್ಮಾನ್ಯ ರೆವಿನ್ಯೂ ಮಂತ್ರಿಗಳನ್ನು ನಾನು ಕೇಳಿದೆ. ಇದು land revenue ಎಂದು ಹೇಳುತ್ತೀರಲ್ಲ ಇದನ್ನು land revnue ಅಲ್ಲವೆಂದು explanation ನಲ್ಲಿ ಏಕೆ ಕರೆದಿದ್ದೀರಿ, ನಿಮ್ಮ ಈ tax ಏನಿದೆ ಅದು land revenue ಅಲ್ಲ ವೆಂದರೆ ಮತ್ತೆ ಏನು ಏನನ್ನುವ ವಿವರಗಳನ್ನು ಅವರಿಂದ ಪಡೆಯಬೇಕು ಎಂದು ಪ್ರಯತ್ನ ಪಟ್ಟೆ...

ಶ್ರೀ ಕಡಿದಾಳ್ ಮಂಜಪ್ಪ.—ನೀವು ಹೇಳಿದ್ದು ಅರ್ಥವಾಗಲಿಲ್ಲ. ಈಗಲಾದರೂ ಹೇಳು ತ್ತೀರಾ ?

ಶ್ರೀ ಕೆ. ಕೆಂಚಪ್ಪ.—ಮೂರನೆಯ ಕ್ಲಾಜಿನಲ್ಲಿ explanation ಎನ್ನುವುದರಲ್ಲಿ ಒಂದನೆಯ ಉಪ ಕಲಮಿನಲ್ಲಿ ಹೇಳಿರುವುದನ್ನು ಪ್ರಸ್ತಾಪಿಸುತ್ತಿದ್ದೇನೆ. ಅದರಲ್ಲಿ ಈ ರೀತಿ ಇದೆ.

"Land revenue remicted shall not be deemed to the land revenue payable for the purposes of this sub-section."

ಶ್ರೀ ಕಡಿದಾಳ್ ಮಂಜಪ್ಪ.—ಲ್ಯಾಂಡು ರೆವೆನ್ಯೂರಿಮಿಷನ್ನನ್ನು ಡಿಸ್ಕೌನ್ಸು ಕಂಡಿಷನ್ನು ಅಥವಾ ಇನ್ನು ಯಾವುದಾದರೂ ಕಾರಣಗಳಿಂದ ಲ್ಯಾಂಡು ರೆವೆನ್ಯೂ ರಿಮಿಷನ್ನು ಆಗಿದ್ದರೆ ಅದಕ್ಕೆ ಸರ್‌ಚಾರ್ಜನ್ನು ಹಾಕುವುದಿಲ್ಲ. ಒಂದು ಸಾರಿ ರಿಮಿಷನ್ನು ಮಾಡಿದ್ದರೂ ಅದರ ಮೇಲೂ ಸರ್ ಚಾರ್ಜು ಹಾಕುವುದಿಲ್ಲ. ಅದಕ್ಕಾಗಿ Land Revenue remitted shall not be deemed to be land Revenue payable for the purposes of this sub-section. ಎಂದಿದೆ.

ಶ್ರೀ ಕೆ. ಕೆಂಚಪ್ಪ.—ಈ ಒಂದು ನಮೂನೆಯ ಡೆಫಿನಿಷನ್ನನ್ನು ಮಾಡತಕ್ಕದ್ದು ತರ್ಕ ಶಾಸ್ತ್ರದಲ್ಲಿನ ಯಾವ ಕಲಮಿನಲ್ಲಿದೆಯೋ ನನಗೇನೋ ಗೊತ್ತಾಗುವುದಿಲ್ಲ ನಾನು ತಿಳಿದುಕೊಂಡಿರು ವುದು "ಬಿಳಿಯ" ಎಂದು ಇದ್ದರೆ ಇದಕ್ಕೆ ಡೆಫನಿಷನ್ನನ್ನು ಮಾಡುವುದಕ್ಕೆ ಬರುವುದಿಲ್ಲ. ಇಂತಹ ಒಂದು ವಿಚಾರ ಇದೆ ಇಲ್ಲಿ. ಕತ್ತೆಎಂದರೆ ಏನು ಎಂದರೆ, ಕುದುರೆ ಅಲ್ಲ ಎನ್ನುವುದು ಗೊತ್ತು. ಹಾಗಿದ್ದರೂ ಕತ್ತೆಯನ್ನು ಕುದುರೆ ಎಂದು ಹೇಳುತ್ತಹೋಗುವಂತೆ ಇಲ್ಲಿದೆ. ಇಲ್ಲಿ ಒಂದು ವಿಚಾರ ತಮಗೆ ಹೇಳುತ್ತೇನೆ. Surchargeನ Definition ನ್ನು ಡಿಫೈನು ಮಾಡುವಾಗ ಮುಖ್ಯವಾಗಿ ಇದು ತೆರಿಗೆಯೇ, ಸೆಸ್ಸೇ, ಅಸೆಸ್‌ಮೆಂಟೇ ಎನ್ನುವುದೇ ಅಥವಾ ಇನ್ನೇನಾದರೂ ಅರ್ಥ ಇದೆಯೇ ಇದಕ್ಕೆ. ಅನೇಕ ಕಾನೂನುಗಳಲ್ಲಿ ಬೇಕಾದಷ್ಟು ಅಭಿಪ್ರಾಯಗಳಿದ್ದರೂ ಕೆಲವಾರು ಅಭಿಪ್ರಾಯಗಳನ್ನು ನಿಗದಿಮಾಡುತ್ತಾರೆ. ಈ ರೀತಿಯಾಗಿ ನಿಗದಿಮಾಡಬೇಕಾದರೆ ಯಾವುದಾದರೂ ಶಾಸನದ ಕಲಮನ್ನು ಅನುಸರಿಸಿ ಹೇಳಬೇಕಾಗುತ್ತದೆ. ತಾವು ಇಲ್ಲಿ ಯಾವುದಕ್ಕೆ ಅನ್ವಯಿಸುತ್ತಿದ್ದೀರೋ ನನಗೆ ಹೇಳುವುದಕ್ಕೆ ಸಾಧ್ಯವಾಗಿಲ್ಲ. ತಾವು ಡಿಫೈನು ಮಾಡುವಾಗ ಎರಡನೇ ಕ್ಲಾಸಿನಲ್ಲಿ (4) ನೇ ಸಬ್ ಕ್ಲಾಸಿನಲ್ಲಿ "Surcharge" Means the Surcharge and additional Surcharge on land Revenue levied under Section 3. ಎಂದಿದೆ

ನಾನು ಹೇಳುವುದು "ದ್ವೈತಿಮಾತರ ಗಣಾಧಿವಾಃ" ಎನ್ನುವಂತೆ ವಿಶ್ಲೇಶಣನನ್ನು ಮಾಡುತ್ತೇನೆಂದು ಹೇಳುತ್ತಾ ಹೋಗುವುದು ಎಷ್ಟು ಸಮಂಜಸವಾದುದು ಆ ಈಶ್ವರನಿಗೇ ಗೊತ್ತು. (ನಗು) ಇಲ್ಲಿ ಡಿಫೈನು ಮಾಡಿರತಕ್ಕ ವಿಧದಿಂದ ಟ್ಯಾಕ್ಸು ಆದರೆ ನೀವು ಈ ರೀತಿ ತರ ತಕ್ಕದ್ದು ಪ್ರಯೋಜನವಾಗುತ್ತದೆಯೇ ? ಇದಕ್ಕನುಸರಿಸತಕ್ಕ ಕಾರ್ಯಕ್ರಮಗಳನ್ನು ಲೆಕ್ಕ ಹಾಕಬೇಕು. ಹೊಸ ರಾಜ್ಯಾಂಗದ ಶಾಸನದ ಪ್ರಕಾರ ಟ್ಯಾಕ್ಸು ಅಲ್ಲದೇ ಹೋದರೆ ಇನ್ನು ಏನು

(ಶ್ರೀ ಕೆ. ಕೆಂಚಪ್ಪ)

ಎನ್ನುವುದನ್ನು ಆಲೋಚನೆ ಮಾಡಬೇಕಾಗಿ ಬರುತ್ತದೆ. ಹಿಂದೂಸ್ಥಾನದ ಲ್ಯಾಂಡು ರೆವೆನ್ಯೂ ಎಂದರೆ ಜಮೀನು ಕಂದಾಯವನ್ನು ನಮೂದು ಮಾಡುವಾಗ ಟ್ಯಾಕ್ಸು ಎಂದು ಇರುವುದರಿಂದ, ಈರೀತಿಯಾಗಿ ಬದಲಾವಣೆಯಾಗಿ ಯಾವ ದಿವಸದಿಂದ ನಮ್ಮ ಹಿಂದೂಸ್ಥಾನದಲ್ಲಿರುವ ಬಂದ ನಮೂನೆ ಇದು. ಅಸೆಸ್ಸುಮೆಂಟು, ಸರ್ವೇ ಸೆಟಲ್‌ಮೆಂಟ್ ಮಾಡಿಲ್ಲ. ಇದಕ್ಕೆ ಬೇಕಾಗುವ ಅನೇಕ ನಿಂಬಂಧನೆಗಳನ್ನು ಮಾಡಿಲ್ಲ. ಈ ಪ್ರಕಾರ ಮಾಡುವುದರಿಂದ ಎಷ್ಟೋ ಆಕ್ಷೇಪಣೆಗಳು ಬರಲವಕಾಶವಾಗುತ್ತದೆ. ಇದನ್ನು ಸಮನ್ವಯ ಮಾಡಬೇಕೆಂದು ಸರಕಾರಿ ಆರ್ಡರುಗಳನ್ನು ಮಾಡುತ್ತಾ ಬಂದಿದ್ದಾರೆ. ಇದಕ್ಕೆ ಹಿಂದೂಸ್ಥಾನದ ರಾಜ್ಯಾಂಗ ಶಾಸನದ 227ನೇ ಆರ್ಟಿಕಲ್ಲಿನ ಪ್ರಕಾರ–ಎಂದರೆ, ಆ ಸಂಸ್ಥಾನದ ಯಾವುದಾದರೂ ಕಾನೂನು ಜಾರಿಯಾಗುವುದಕ್ಕೆ ಮುಂಚೆ ಸಂಸ್ಥಾನದಲ್ಲಿ ಅದು ಜಾರಿಯಲ್ಲಿದ್ದರೆ, ಅದು ಶಾಸನವಾಗಿ ಉಳಿಯುತ್ತದೆಯೇ? ಇಲ್ಲ ಎಂದು ನಾನು ಭಾವನೆಮಾಡಿಕೊಳ್ಳುತ್ತೇನೆ. 227ನೇ ಆರ್ಟಿಕಲ್ ಪ್ರಕಾರ ಶಾಸನ ಇತ್ತೋ ಇಲ್ಲವೋ ಎನ್ನುವುದಕ್ಕೆ ಇದರಲ್ಲಿ ನಿಗದಿಯಾಗಿ ಒಂದು ಮಿತಿಯನ್ನು ಹಿಂದೆ ಮಾಡಿರಲಿಲ್ಲ ಆಗಿಂದಾಗ್ಗೆ ಸರಕಾರ ದವರು ನಿಗದಿಮಾಡುತ್ತಾರೆ. ಈಗ ಇದಕ್ಕೇನು ಹೇಳುತ್ತಾರೆ. 227ನೇ ಆರ್ಟಿಕಲ್ಲಿನ ಪ್ರಕಾರ ಯಾವರೀತಿಯಾಗಿ ಕಂಟ್ರೋಲುಮಾಡುತ್ತಾರೆ? ಇದು ಅನ್ಯಾಯದ ತೆರಿಗೆಎನ್ನುವುದನ್ನು ತಾವು ಆಲೋಚನೆಮಾಡಬೇಕಾಗುತ್ತದೆ. ಈ ಶಾಸನ ಎನ್ನುವುದು ಸರ್‌ಚಾರ್ಜ್ ಎಂದು ಮಾತ್ರವಿದೆ ಬಡವರ ಮೇಲೆ ಬೀಳುವುದಿಲ್ಲ ಬಲ್ಲಿದರ ಮೇಲೆ ಬೀಳುತ್ತದೆ, ಇದರ ಮೇಲೆ ಇಷ್ಟೊಂದು ವ್ಯಾಖ್ಯಾನ ಮಾಡುವುದು ಸರಿಯೇ ಎಂದು ತಾವು ಆಲೋಚನೆಮಾಡುವುದಾದರೆ, ಮೈಸೂರು ಸಂಸ್ಥಾನದ ಎರಡುಕೋಟಿ ಜನರಲ್ಲಿ, ಶೇಕಡಾ ತೊಂಬತ್ತರಷ್ಟು ಜನರ ಮೇಲೆ ಇದು ಬದ್ಧೇಬೀಳುತ್ತದೆ. ಇದರಲ್ಲಿ ತಾವು ಹೇಳುವ ರೀತಿಯಾಗಿ ಇಪ್ಪತ್ತು ರೂಪಾಯಿಗಳಿಗೆ ಮೇಲ್ಪಟ್ಟು ಕಂದಾಯ ಕೊಡತಕ್ಕ ಜನರೇ ಬಹಳ ಹೆಚ್ಚು ಇದಕ್ಕಿಂತ ಕಡಿಮೆ ಕಂದಾಯ ಕೊಡುವವರು ಬಹಳ ಕಡಿಮೆ. ಇದರೊಳಗೆ ನೀರಾವರಿಗೂ ಟ್ಯಾಕ್ಸನ್ನು ಸೇರಿಸಿದ್ದೀರಿ. ಈ ರೀತಿಯಾಗಿರುವ ಡೆಫೆನಿಷನ್ನಿನ ಅರ್ಥವೇನು ಎನ್ನುವುದು ಗೊತ್ತಾಗುವುದಿಲ್ಲ. ಇದರಲ್ಲಿ ಹೀಗಿದೆ.

(2) "Land Revenue" means all sums and payments received or claimable as land revenue or as jodi. Jodi, quit rent Katubadi or other amount of like nature, by whatever name called by or on behalf of Government from any person on account of land held by or vested in him and includes water cess water rate or irrigation cess payable to the Government for water supplied or used for the irrigation of land where such cess or rate does not exceed fifteen rupees per acre, but does not include any other cess or Surcharge payable on land Revenue. ಹದಿನೈದು ರೂಪಾಯಿಗಿಂತ ಹೆಚ್ಚಿನ ಕಂದಾಯ ಆಗದೆ ಹೋದರೆ ಆಗ ಅದಕ್ಕೂ ಅನ್ವಯಿಸುತ್ತದೆ. ಸೆಸ್ಸು ಎನ್ನತಕ್ಕದ್ದು 15 ರೂಪಾಯಿಗಳಿಗಿಂತ ಹೆಚ್ಚು ಆಗುವುದಿಲ್ಲ. ವಾಟರ್ ಸೆಸ್ಸು, ಡೆವಲಪ್‌ಮೆಂಟು ಸೆಸ್ಸು ಎನ್ನುವುದು 15 ರೂಪಾಯಿಗಿಂತ ಹೆಚ್ಚಾಗಿ ಆಗುವುದಿಲ್ಲ. ಇರಿಗೇಷನ್ನು ಸೆಸ್ಸು ಎಂದು ಹದಿನೈದು ರೂಪಾಯಿಗಿಂತ ಹೆಚ್ಚುಮಾಡುತ್ತಹೋದರೆ, ಅದಕ್ಕಿಂತ ಕಡಿಮೆ ಇರುವವರು ಎಲ್ಲಿಗೆ ಹೋಗುತ್ತಾರೆ? ಈಗ ವಾಟರುರೇಟು ಹದಿನೈದು ರೂಪಾಯಿಗಿಂತ ಹೆಚ್ಚಿಗೆ ಎಲ್ಲಿದೆಯೋ ನನಗೆ ಗೊತ್ತಿಲ್ಲ. ಆದುದರಿಂದ ಇದರ ಅರ್ಥವೇನು? ಯಾರಿಗಾದರೂ ಮೂರು ಎಕರೆ ಇದ್ದರೆ. ಒಂದು ರೂಪಾಯಿ ಕಂದಾಯ ಎಂದು ಲೆಕ್ಕಹಾಕಿಕೊಂಡು ಮೂರು ರೂಪಾಯಿ ಚಾರ್ಜು, 5½ ಅಥವಾ ಆರು ವಾಟರುರೇಟು, ಹೀಗೆಲ್ಲ ಹಾಕಿದರೆ ಇಪ್ಪತ್ತು ರೂಪಾಯಿಗಳಿಗೆ ಮೇಲ್ಪಟ್ಟು ಹೋಗುತ್ತದೆ. ಎಂದು ಈ ರೀತಿಯಾದ ಶಾಸನಮಾಡಿಕೊಂಡು ಹೋದರೆ ಸಾಕು ಅದಕ್ಕೆ ನಾನು ಹೇಳುವುದು, ರೈತನ ಮೇಲೆ ಇಂತಹ ಹೆಚ್ಚಿನ ಹೊರೆಗಳನ್ನು ಹಾಕುತ್ತಾ ಹೋದರೆ ಅವನಿಗೆ ಕಡಿಮೆ

ಮಾಡಿದ್ದೇನು? ಇದು ಹೇಗಿದೆ ಎಂದರೆ, "It is more imaginary than real" ಇದರ ಮೇಲು ತಾವು ತಮ್ಮ ಅಧೀನದಲ್ಲಿರುವ ಅಧಿಕಾರಿಗಳ ಕಡೆಯಿಂದ ಮಾಡಿರತಕ್ಕ ಸರಕಾರಿ ಆರ್ಡರುಗಳು ಹೀಗಿದ್ದರೆ, assessments, water rate contribution ಎಂದು ತಿದ್ದುಪಡಿಯನ್ನು ಮಾಡುತ್ತಾ ತಮಗೆ ಏನುಬೇಕಾದರೂ ಮಾಡಿ ಬಿಡಬಹುದು. ನಿದರ್ಶನವಾಗಿ ಹೇಳುವುದಾದರೆ, ನಮ್ಮ ಹಿರಿಯುರುಬಳಿ ಇರುವ ವಾಣಿವಿಲಾಸ ಸಾಗರದಿಂದ 1958ರಲ್ಲಿ ಜನಕ್ಕೆ ಯಾವ ರೀತಿಯಾಗಿ ಅಚ್ಚುಕಟ್ಟುಮಾಡಿದರು ಎಂದರೆ....

ಶ್ರೀ ಕಡಿದಾಳ್ ಮಂಜಪ್ಪ.— ಐದು ರೂಪಾಯಿಗಿಂತ ಹೆಚ್ಚಾಗಿ ಯಾವ ಕಡೆಯಲ್ಲಿಯೂ ಕಡಿಮೆ ವಾಟರು ರೇಟು ವಾಣಿವಿಲಾಸ ಸಾಗರದ ಕೆಳಗಿರುವ ಜಮೀನುಗಳಿಗೆ ಇದೆಯಲ್ಲಾ (ನಗು)

ಶ್ರೀ ಕೆ. ಕೆಂಚಪ್ಪ.—Where reasons fail, abuses begin. ಎಂದು ಹೇಳಬೇಕಾಗುತ್ತದೆ. ನಾನು ಹೇಳುವುದು ಮೈಸೂರು ಸಂಸ್ಥಾನದಲ್ಲೇ ಇಲ್ಲ ಐದುವರೇ ರೂಪಾಯಿ ಹಾಕಿದ್ದೀರೀ. ಐದುವರೇ ರೂಪಾಯಿಗಿಂತ ಮೇಲ್ಪಟ್ಟು ವಾಣಿವಿಲಾಸ ಸಾಗರದಲ್ಲ ಹಾಕಿದ್ದಾರೆ. ಅದಕ್ಕಾಗಿ ಹೇಳುತ್ತಿರುವುದು ಒಂದು ವರ್ಷದಲ್ಲಿ ಎಷ್ಟುಸಾರಿ ಹಾಕುತ್ತೀರಿ ಎಂದು? ಲ್ಯಾಂಡು ರೆವಿನ್ಯೂ ಕೋಡಿನಂತೆ ಇರುವ ಲ್ಯಾಂಡು ರೆವಿನ್ಯೂರೂಲ್ಸಿನ ಪ್ರಕಾರ ಕಂದಾಯ ಹಾಕಬೇಕು. ಕಂದಾಯವನ್ನು ಸಕಾಲದಲ್ಲಿ ನಿಗದಿಮಾಡಬೇಕು. ಮೊದಲಸಾರಿ ಡೆಪ್ಯುಟೀ ಕಮಿಷನರು ಹೋಗಿ ಅದರ ಮೇಲೆ ಸ್ವಲ್ಪದಿವಸಗಳೊಳಗಾಗಿ wet rate ಎಂದರೆ ತರೀ ಕಂದಾಯವನ್ನು ಮಾಡಬೇಕೆಂದು ಲ್ಯಾಂಡು ರೆವೆನ್ಯೂರೂಲ್ಸ್‌ನಲ್ಲಿ, 32ನೇ ರೂಲಿನಲ್ಲಿದೆ. ಅದರಲ್ಲಿ ಹೀಗಿದೆ.

1916ನೇ ಇಸವಿಯಲ್ಲಿ ವಾಣೀ ವಿಲಾಸ ಸಾಗರದಲ್ಲಿ ನೀರು ಕೊಟ್ಟಿದ್ದು. 1958ನೇ ಇಸವಿಯಲ್ಲಿ ಸೆಪ್ಟೆಂಬರ್‌ನಲ್ಲಿ ಇದನ್ನು ಹೆಚ್ಚಿಸಿದ್ದು ಅಲ್ಲದೆ 1960ನೇ ಇಸವಿ ಫೆಬ್ರವರಿ ತಿಂಗಳಿನೊಳಗೇ ನಾಲ್ಕು ಸಾರಿ ವ್ಯತ್ಯಾಸ ಮಾಡಿದ್ದಾರೆ. ಇದು ತಮ್ಮ ಲ್ಯಾಂಡ್ ರೆವಿನ್ಯೂ ನಿದರ್ಶನ ದೃಷ್ಟಿಯಿಂದಲೋ ಅಥವಾ ಯಾವುದಾದರೂ ಒಂದು ತತ್ವದಿಂದಲೋ ಎಂದು ನಾನು ಪ್ರಶ್ನೆ ಕೇಳಬೇಕಾಗಿದೆ. ಒಟ್ಟಿನಲ್ಲಿ ಜಮೀನಿನ ಕಂದಾಯವನ್ನು ಪದೇ ಪದೇ ಬದಲಾವಣೆ ಮಾಡಬೇಡಿ. ರೈತವಾರಿ ಸಿಸ್ಟಂನಲ್ಲಿರತಕ್ಕ ವ್ಯವಸಾಯ ವರಮಾನದಲ್ಲಿ ಈ ರೀತಿ ಬದಲಾವಣೆ ಮಾಡುವುದರಿಂದ ರೈತ ನಿಜವಾಗಿ ತನ್ನ ಜಮೀನಿನಲ್ಲಿ ನಂಬಿಕೆ ಇಲ್ಲದೆ ತನ್ನ ಜಮೀನನ್ನು ಅಭಿವೃದ್ಧಿಗೆ ತರುವುದಿಲ್ಲ. ಅದರಿಂದ ವ್ಯವಸಾಯ ಅಭಿವೃದ್ಧಿಯಾಗುವುದಿಲ್ಲ. ಇದಕ್ಕೋಸ್ಕರ ಸ್ಟೇಟ್‌ಮೆಂಟ್ ಕೊಡಬೇಕು ಎಂಬುದು ಕೆಲವರ ದೃಷ್ಟಿಯಿಂದ ಸರಿಯಾಗಿರಬಹುದು. ಅವರುಗಳಿಗೆ ಖಾಯಂ ಸೌಕರ್ಯವನ್ನು ಒದಗಿಸಬೇಕು. ಜಮೀನುಗಳ ಮೇಲೆ ಸರ್ವೆ ಮಾಡತಕ್ಕ ಕಾರ್ಯದ ಬಗ್ಗೆ ನಾನಾ ನಮೂನೆಯಾಗಿರತಕ್ಕ ಕಾನೂನುಗಳನ್ನು ಅನುಸರಿಸಿ ಹೆಚ್ಚಿಗೆ ಮಾಡಬೇಕು. ಇಲ್ಲದೇ ಹೋದರೆ ಜಮೀನುಗಳ ಮೇಲೆ ಅವರಿಗಿರತಕ್ಕ ಖಾಯಂ ಅಧಿಕಾರ ಹೋಗುತ್ತದೆ. ಇವರಿಗೆ ಜಮೀನು ಉಳಿಯುವುದಿಲ್ಲ. ವ್ಯವಸಾಯವನ್ನು ಅವನು ಅಭಿವೃದ್ಧಿ ಮಾಡುವುದಿಲ್ಲ. ವ್ಯವಸಾಯವೇ ಹಾಳಾಗುತ್ತದೆ. ಅ ಅ—ಇ ಈ ಮೊದಲ್ಗೊಂಡು ರೈತವಾರಿ ಸಿಸ್ಟಂನಲ್ಲಿ ಉಪೇಕ್ಷೆ ಮಾಡಿದಂತಾಗುತ್ತದೆ. 1958ನೇ ಸೆಪ್ಟೆಂಬರ್‌ನಲ್ಲಿ ಐದೂವರೆ ರೂಪಾಯಿ ನೀರಾವರಿ ಕಂದಾಯ ಇದ್ದುದು 1960ನೇ ಇಸವಿಯಲ್ಲಿ 25 ರೂಪಾಯಿಗಳ ನೀರಾವರಿ ಕಂದಾಯ ಬಾಗಾಯಿತು ಜಮೀನಿಗೆ ಹಾಕಿದ್ದೇವೆ ಎಂದು ಹೇಳುತ್ತಿದ್ದೀರಿ. ಆದ್ದರಿಂದ ಈಗ ನಿಮ್ಮ ಸರ್‌ಚಾರ್ಜು ಇದರಿಂದ ಹೋಗುತ್ತದೋ ಏನೋ ಗೊತ್ತಿಲ್ಲ. ಈ ಮಟ್ಟದಲ್ಲಿ ನಾವು ಆಲೋಚನೆ ಮಾಡುತ್ತಿದ್ದೇವೆ. ಮುಖ್ಯವಾಗಿ ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಈ ರೀತಿ ಒಂದು ಸರ್‌ಚಾರ್ಜ್ ಎಂಬ ಪದವನ್ನು ಇದರಲ್ಲಿ ಹಾಕುವಾಗ ಇದು ಎಷ್ಟರಮಟ್ಟಿಗೆ ಜನರ ಹಿತವನ್ನು ರಕ್ಷಣೆ ಮಾಡುತ್ತದೆಂಬುದನ್ನು ಏನಾದರೂ ಆಲೋಚನೆ ಮಾಡಿದ್ದೀರಾ? ಎಷ್ಟರ ಮಟ್ಟಿಗೆ ಅವರಿಗೆ ತಿಂಗಳಿಗೆ ಸರಾಸರಿ ಉತ್ಪತ್ತಿ ಇದೆ, ವರ್ಷಕ್ಕೆ ಸರಾಸರಿ ಉತ್ಪತ್ತಿ ಎಷ್ಟು ಅದೇರೀತಿ ಖರ್ಚು ಎಷ್ಟಿದೆ ಎಂಬುದನ್ನು ನೋಡಬೇಕು. ಮತ್ತು ಅಂಥಾದ್ದನ್ನು ಅದನ್ನು ಯಾವರೀತಿ

(ಶ್ರೀ ಕೆ. ಕೆಂಚಪ್ಪ)

ನಿಭಾಯಿಸಬೇಕು ಎಂಬುದನ್ನು ತಾವು ಆಲೋಚನೆ ಮಾಡಬೇಕು. ನಿಜವಾಗಿ ಅವರಿಗೆ ಈಗಿನ ತೆರಿಗೆಗಳನ್ನು ಕೊಡುವುದಕ್ಕೆ ಶಕ್ತಿ ಇದೆಯೋ ಇಲ್ಲವೇ ಎಂಬುದನ್ನು ತಾವು ಆಲೋಚನೆ ಮಾಡಬೇಕು. ಈ ದೃಷ್ಟಿಯಿಂದ ನಾನು ಹೇಳುವುದೇನೆಂದರೆ ಆ ಮಟ್ಟದಲ್ಲಿ ಅವರಿಗೆ ಈರೀತಿಯಾದಂಥ ಅಡ್ಡಿ ಆತಂಕಗಳು ಇರುವಾಗ ಈ ಸೆಸ್ಸನ್ನು ಬೇರೆ ಹಾಕಿದರೆ ರೈತಾಪಿ ಜನರು ಅಭಿವೃದ್ಧಿಯಾಗುವುದಿಲ್ಲ. ರೈತನಿಂದ ಬರತಕ್ಕ ಕಾಳುಕಡ್ಡಿ ಕಡಿಮೆ ಬಂದು ಅವರಿಂದ ದೇಶಕ್ಕೆ ಕಲ್ಯಾಣವನ್ನುಂಟುಮಾಡುವುದಕ್ಕೆ ಬದಲು ದೇಶವನ್ನು ಹಾಳುಮಾಡುವುದಕ್ಕೆ ನೀವೇ ಕಾರಣರಾಗುತ್ತಿದ್ದೀರಿ ಎಂದು ಹೇಳಿದರೆ ಅದೇನೂ ತಪ್ಪಾಗಲಿಕ್ಕಿಲ್ಲ. ಇದರಿಂದ ರೈತ ಈಚೆಗೆ ಬೆಳೆಯುವ ದಿನಸಿಗಳನ್ನೇ ಕಡಮೆ ಮಾಡುತ್ತಿದ್ದಾರೆ. ಅನೇಕ ಆಹಾರ ಪದಾರ್ಥಗಳ ಬೆಳವಣಿಗೆಯೇ ಹಾಳಾಗಿ ಹೋಗುತ್ತದೆ. ಇದು ಖಡಾಖಂಡಿತ. ಇದರಲ್ಲೇನೂ ಬದಲಾವಣೆ ಇಲ್ಲ. ಇಂಥಾದ್ದನ್ನು ಸರ್ಕಾರದವರು ತೀವ್ರಾಲೋಚನೆಯಿಂದ ಮಾಡಬೇಕು. ಸರ್‌ಚಾರ್ಜು ಎಂಬ ಪದ ಬಹಳ ಅನ್ಯಾಯ ಪದ. ಮೇಲ್ತೆರಿಗೆ ಎಂದೂ ಎಲ್ಲೂ ಇಲ್ಲ. ಈ ರೀತಿಯಾದ ತೆರಿಗೆ ಹಾಕುವುದು ಖಂಡಿತ ಸರಿಯಲ್ಲ. ಈಗಾಗಲೇ ಬೇಕಾದಷ್ಟು ತೆರಿಗೆಗಳನ್ನು ಅವನಮೇಲೆ ಹಾಕಿದ್ದೀರಿ. ಅದರ ಜೊತೆಗೆ ಇದು ಬೇರೆ ತೆರಿಗೆ. ಇತರ ಪ್ರಾಂತಗಳ ಕಾನೂನನ್ನು ಚೆನ್ನಾಗಿ ಪರಿಶೀಲನೆ ಮಾಡಿನೋಡಿ. ಅದರ ಪ್ರಕಾರ ಹೇಳುವುದಾದರೆ, ಯಾರಿಗೆ ಶಕ್ತಿ ಇದೆಯೋ ಅಂತಹವರಿಂದ ಈ ತೆರಿಗೆಯನ್ನು ಇನ್‌ಕಂಟ್ಯಾಕ್ಸ್ ರೂಪದಲ್ಲಿ ಪ್ರತ್ಯಕ್ಷ ತೆರಿಗೆಯ ಹಾಗೆ ವಸೂಲು ಮಾಡಿ. ಆದರಿಂದ ತುಂಬಾ ವರಮಾನೋತ್ಪತ್ತಿಯಾಗುತ್ತದೆ. ಆದರೆ ಆ ಪ್ರತ್ಯಕ್ಷ ತೆರಿಗೆಯನ್ನು ಕೈಲಾಗದ ಜನರ ಮೇಲೆ ಹಾಕುವುದು ಸರಿಯಲ್ಲ. ಅದು ಬಹು ಹೀನಕರವಾದ ಕೃತ್ಯವಾಗುತ್ತದೆ. ಅಂತಹವರ ಮೇಲೆ ಈ ರೀತಿಯಾದ ತೆರಿಗೆಯನ್ನು ವಿಧಿಸುವುದರಿಂದ ದೇಶದ ಪ್ರಗತಿಯೇನೂ ಆಗುವುದಿಲ್ಲ. ಇನ್ನೂ ಹಾನಿಯೇ ಹೆಚ್ಚಾಗುತ್ತದೆಂದು ನಾನು ಖಂಡಿತವಾಗಿ ಹೇಳುತ್ತೇನೆ. ನಮ್ಮ ಮೈಸೂರು ಸಂಸ್ಥಾನದಲ್ಲಿರತಕ್ಕ ವರ್ತಕ ಮಂಡಲಿಯವರು ಮತ್ತು ಕೈಗಾರಿಕೋದ್ಯಮಗಳಲ್ಲಿ ನಿರತರಾಗಿರತಕ್ಕವರು ಅದರಲ್ಲೂ ಸ್ವಲ್ಪ ದೊಡ್ಡ ಅಧಿಕಾರ ವರ್ಗದಲ್ಲಿರತಕ್ಕವರೂ ಸರ್ಕಾರಿ ನೌಕರಿಯಲ್ಲಿರತಕ್ಕವರು, ಮಂತ್ರಿಗಳಾಗಿ ವರಮಾನ ಪಡೆಯುತಕ್ಕವರು, ಹೆಂಡ ಸಾರಾಯಿಗಳನ್ನು ಮಾರಿ ಅದರಿಂದ ಹೆಚ್ಚು ವರಮಾನ ಪಡೆಯುವವರು—ಇಂತಹವರಿಗೆ ಹೆಚ್ಚು ವರಮಾನ ಬರುವುದರಿಂದ ಅಂತಹವರ ಮೇಲೆಲ್ಲಾ ಇಂತಹ ತೆರಿಗೆಗಳನ್ನು ಹಾಕಬೇಕೇ ವಿನಹ ರೈತಾಪಿ ಜನರಿಗೆ ಸಾಕಷ್ಟು ವರಮಾನವಿದೆಯೆಂದು ಹೇಳಿ ಅವರ ಮೇಲೆ ಈ ಸರ್‌ಚಾರ್ಜು ತೆರಿಗೆ ಬೇರೆ ಹಾಕುವುದು ನ್ಯಾಯವಲ್ಲ. ಇನ್ನೂ ಕೆಲವರ ನಿದರ್ಶನಗಳನ್ನು ಬಿಟ್ಟಿದ್ದಾರೆ. ಕಾಫಿ ಪ್ಲಾಂಟರ್ಸ್, ಕಾರ್ಡಮಮ್ ಪ್ಲಾಂಟರ್ಸ್, ತೆಂಗಿನತೋಟ, ಅಡಿಕೆತೋಟ ಮಾಡುವವರು—ಇಂತಹವರಿಗೆ ಹೆಚ್ಚು ವರಮಾನ ಇರಬಹುದೇ ಹೊರತು ಸರ್ವೇ ಸಾಧಾರಣವಾಗಿ ಮೊದಲಿನಿಂದಲೂ ಒಂದೇ ರೀತಿಯಲ್ಲಿ ಯಥಾಪ್ರಕಾರ ಜಮೀನು ಮಾಡುವ ರೈತನಿಗೆ, ತನಗೆ ಬೇಕಾದಷ್ಟು ದುಡ್ಡು ಬಾರದೆ ಬಹಳ ನಿಕೃಷ್ಟದೆಸೆಯಿಂದ ಇರುವವರ ಮೇಲೆ ಈ ತೆರಿಗೆ ಹಾಕುತ್ತೀರಿ. ಇದು ಸರಿಯಲ್ಲ. ದೊಡ್ಡ ದೊಡ್ಡ ಜಮೀನ್ದಾರರ ಮಕ್ಕಳೇನೋ ಕೆಲವರು ಪ್ರೈಮರಿ ಸ್ಕೂಲ್ ಟೀಚರ್ಸ್ ಆಗಿ 60—70—80 ರೂಪಾಯಿಗಳ ಸಂಬಳ ಪಡೆಯುತ್ತಿರುತ್ತಾರೆ. ಇದನ್ನು ನೋಡಿ ಈಗ ಹೆಚ್ಚಾಗಿ ಜಮೀನು ಪಡೆಯದಿರುವವರೂ ಸಹ ಜೋಳ, ರಾಗಿ ಬೆಳೆಯುವುದನ್ನು ಬಿಟ್ಟು ತಮ್ಮ ಮಕ್ಕಳನ್ನೂ ಸಹ ಸರ್ಕಾರೀ ಕೆಲಸಗಳಿಗೆ ಕಳುಹಿಸುವುದಕ್ಕೆ ಹತ್ತಿದ್ದಾರೆ. ಅಂದಮೇಲೆ ಸಣ್ಣ ರೈತರು ಯಾವರೀತಿ ಬಾಳಬೇಕು? ಅವರಿಗೆ ಅಷ್ಟಾಗಿ ಉತ್ಪತ್ತಿ ಇಲ್ಲ.

ತೆರಿಗೆಗಳು ಜಾಸ್ತಿ. ಮಕ್ಕಳು ವಿದ್ಯಾವಂತರಾಗುವುದಕ್ಕೂ ಕಷ್ಟ. ಅವರ ಸ್ಥಿತಿ ಎಷ್ಟು ಕಠಿಣವಾಗಿದೆ ಎಂಬುದನ್ನು ವರ್ಣಿಸುವುದಕ್ಕಾಗುವುದಿಲ್ಲ. ಇದರಿಂದ ಬಡ ರೈತನಾದವನು ಸಾಲ ಮಾಡುತ್ತಾನೆ. ಯಾವ ರೀತಿಯಾದರೂ ತೆರಿಗೆಗಳನ್ನು ಕಟ್ಟುತ್ತಾನೆ ಅವನು ಜೀವನ ಮಾಡಬೇಕಾಗುತ್ತದೆ. ಅವನ ಕಷ್ಟವಂತೂ ಹೇಳತೀರದು; ಬಹಳ ಜಾಸ್ತಿ ತೆರಿಗೆಗಳಂತೂ ನಾನಾವಿಧಗಳಾಗಿವೆ. ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್, ಲೋಕಲ್‌ಸೆಸ್, ಆರೋಗ್ಯಸೆಸ್, ಎಜುಕೇಷನ್‌ಸೆಸ್, ಮುನಿಸಿಪಲ್‌ಟ್ಯಾಕ್ಸ್—ಇತರ ಇನ್‌ಡೈರೆಕ್ಟ್ ಟ್ಯಾಕ್ಸೇಷನ್ನುಗಳು—ಹೀಗೆ ನೂರೆಂಟು ವಿಧವಾದ ತೆರಿಗೆಗಳನ್ನು ಅವನಮೇಲೆ ವಿಧಿಸಲಿಕ್ಕೆ ಹೊರಟಿದ್ದೀರಿ. ಇದೂ ಅಲ್ಲದೆ ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿಯೂ ಅವನಮೇಲೆ ಟ್ಯಾಕ್ಸ್, ಅಂದಮೇಲೆ ಈಗಿರತಕ್ಕ ರೈತನಿಗೆ ಬೀಳುವಷ್ಟು ತೆರಿಗೆಯ ಹೊರೆ ಯಾರಮೇಲೂ ಬೀಳುವುದಿಲ್ಲವೆಂದು ಹೇಳಿದರೆ ಅದೇನೂ ತಪ್ಪಾಗು ವುದಿಲ್ಲ. ಅಗ್ರಿಕಲ್‌ಚರಲ್ ಪ್ರೊಡ್ಯೂಸಸ್ ಮೇಲೆಲ್ಲಾ ತೆರಿಗೆಗಳನ್ನು ಹಾಕುತ್ತೀರಿ. ಪ್ರತಿ ಯೊಂದು ಬೆಳೆಯೂ ಅವನಿಂದಲೇ ದೇಶಕ್ಕೆ ಬರಬೇಕು. ಪ್ರತಿಯೊಂದು ಮಸೂದೆಯೂ ಅವನ ಪರವಾಗಿಯೇ ದೇಶದಲ್ಲಿ ಕಾನೂನು ಆಗಿ ಜಾರಿಗೆ ಬರಬೇಕು. ಈ ರೀತಿಯಾಗಿರುವವನ ಮೇಲೆ ತನ್ನ ವ್ಯವಸಾಯೋತ್ಪನ್ನದ ಬಗ್ಗೆ ವಿಶೇಷವಾಗಿ ತೆರಿಗೆಯ ಹೊರೆಯನ್ನು ಹೊರಿಸುವುದು ಖಂಡಿತ ವಾಗಿ ಅನ್ಯಾಯವೆಂದು ನಾನು ಹೇಳುತ್ತೇನೆ. ಮಳೆ ಬೆಳೆ ಹೆಚ್ಚಾಗಿದೆಯೆಂದು ಬಹಳ ವರ್ಷ ಗಳಿಂದ ನಾನಾ ಪದಾರ್ಥಗಳ ಮೇಲೆ ತೆರಿಗೆಯನ್ನು ಹಾಕಿಲ್ಲವೆಂದು ಯೋಚಿಸಿ ಈಗ ಎಲ್ಲ ಪದಾರ್ಥಗಳ ಮೇಲೂ ಇನ್‌ಡೈರೆಕ್ಟಾಗಿ ಆದರೂ ತೆರಿಗೆ ವಿಧಿಸಬೇಕೆಂದು ಸರ್ಕಾರದವರು ಹೊರಟಿರುವುದನ್ನು ನೋಡಿದರೆ ಅದೇನೂ ಅಷ್ಟಾಗಿ ಸಮಂಜಸವಾಗಿ ಕಾಣುವುದಿಲ್ಲ.

ಶ್ರೀ ಟಿ. ಮರಿಯಪ್ಪ.—ರಿ-ಸೆಟಲ್‌ಮೆಂಟ್ ಮಾಡಿದರೆ ಅವನು ತೆರಿಗೆಯನ್ನು ಕೊಡ ಬೇಕೋ ಬೇಡವೋ?

ಶ್ರೀ ಕೆ. ಕೆಂಚಪ್ಪ.—ರಿ-ಸೆಟಲ್‌ಮೆಂಟ್ ಮಾಡುವುದನ್ನು ಬೇಡ ಎಂದು ನಾನು ಹೇಳು ವುದಿಲ್ಲ. ರಿ-ಸೆಟಲ್‌ಮೆಂಟ್‌ನಿಂದ ಹೆಚ್ಚು ಆದಾಯ ಬರುತ್ತದೆಂದು ಸರ್‌ಚಾರ್ಜು ಹಾಕಲಿಕ್ಕೆ ಹೋಗಬೇಡಿ. ಅಧಿಕಾರದಲ್ಲಿದ್ದೇವೆ ಎಂದು ಏನು ಬೇಕಾದರೂ ಮಾಡಬಹುದು ಎಂಬ ನಿಮ್ಮ ನಿಲುವನ್ನು ಬಿಡಿ. ಈ ಅಧಿಕಾರ ಮುಂದೆ ಹೋಗಬಹುದು. ಈ ಅಧಿಕಾರ ಶಾಶ್ವತವಲ್ಲ. ಇಂತಹ ಅಧಿಕಾರದ ಮದ ಇರಬಾರದು. ಮನುಷ್ಯ ಅಧಿಕಾರದಲ್ಲಿರುವವರೆಗೂ ಒಂದು ರೀತಿಯ ಅಧಿಕಾರದ ಮದ ಇದ್ದೇ ಇರುತ್ತದೆ. ಅದು ಮಂತ್ರಿಗಳಲ್ಲಿಯೇ ಆಗಲಿ ಅಥವಾ ಅಧಿಕಾರಿ ಗಳಲ್ಲಿಯೇ ಆಗಲಿ ಇರಬಾರದು. ರಿ-ಸೆಟಲ್‌ಮೆಂಟ್‌ನಲ್ಲಿ ಏನ್ನೇನು ಮಾಡಿದ್ದೀರಿ ಎಂಬುದನ್ನು ಸಹ ನಾನು ಹೇಳಬಲ್ಲೆ. ಸ್ವಲ್ಪ ಅಧಿಕಾರದ ಮದವನ್ನು ಬಿಟ್ಟು ಸನ್ಮಾರ್ಗದಲ್ಲಿ ನಡೆಯಿರಿ ಎಂದು ನಾನು ಹೇಳುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲಿ ಮದ ಬಂದಿದೆ?

ಶ್ರೀ ಕೆ. ಕೆಂಚಪ್ಪ.—ಮದ ಎಲ್ಲಿ ಬಂದಿದೆಯೆಂದರೆ ತಮ್ಮ ಅಧಿಕಾರದಲ್ಲಿ ಮದ. ಈಗ ಹೆಂಡ ಕುಡಿದವರಿಗೂ ತಲೆಯಲ್ಲಿ ಒಂದು ರೀತಿಯ ಮದವಿರುತ್ತದೆ. ಅಷ್ಟು ಮದಗಳಲ್ಲಿ ಅದೂ ಒಂದು ಮದವೆಂದು ಮಹನಿಯರೇ ಪುರಾತನ ಕಾಲದಲ್ಲಿಯೇ ಹೇಳಿದ್ದಾರೆ. ಇನ್ನು ಸೆಟಲ್ ಮೆಂಟ್ ಕ್ಲಾಸಿಫಿಕೇಷನ್ನಿನಲ್ಲಿ ಹೇಳಿರುವುದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ.

(ಶ್ರೀ ಕೆ. ಕೆಂಚಪ್ಪ)

ರೂಪಾಯಿಗೆ 20 ನಯೇಪೈಸೆ ಎಂದು ಹಾಕಿದ್ದೀರಿ. ಅದನ್ನು ಈಗ ಸೇರಿಸಬೇಡಿ. ಅದರ ಮೇಲೆ ಮತ್ತೆ 15 ನಯೇಪೈಸೆ ಸರ್‌ಚಾರ್ಜ್ ಎಂದು ಹೇಳಿ ಈಗ ಒಟ್ಟು ಒಂದು ರೂಪಾಯಿಗೆ 35 ನಯೇಪೈಸೆ ತೆರಿಗೆ ಕೊಡಬೇಕೆಂದರೆ ಬಡರೈತ ಹೇಗೆ ಕೊಡಬೇಕು ? ಕಾನೂನಿನಲ್ಲಿ ಆರೀತಿ ಹೇಳಿದ್ದೀರಿ. ಲ್ಯಾಂಡ್‌ರೆವಿನ್ಯೂ ಕೋಡಿನಲ್ಲಿ ಜಮೀನು ಕಂದಾಯವನ್ನು ತೆರಿಗೆ ರೂಪದಲ್ಲಿ ತೆಗೆದುಕೊಳ್ಳಬಾರದು ಎಂದು ಹೇಳಿದೆ. ಆದ್ದರಿಂದ ಅದನ್ನು ಹೆಚ್ಚು ಮಾಡುವ ಉದ್ದೇಶವನ್ನು ತಾವು ತೆಗೆಯಬೇಕು. ಜಮೀನಿನಿಂದ ಬರತಕ್ಕ ಪ್ರತಿಯೊಂದು ಮಾಲಗೂ, ಅನೇಕ ಪದಾರ್ಥಕ್ಕೂ ದೃಷ್ಟಿಗಳಿಂದ ತೆರಿಗೆಗಳನ್ನು ಹೆಚ್ಚು ಮಾಡುತ್ತಾ ಹೋದರೆ ಬಡರೈತನಾದವನಿಗೆ ವೊಗವ್ಯೊಗಿ ಶೇಕಡಾ 25 ಕ್ಕಂತ ಹೆಚ್ಚಾಗಿಯೇ ತನ್ನ ಉತ್ಪತ್ತಿಯಲ್ಲಿ ತೆರಿಗೆಗಾಗಿ ಹೋಗುತ್ತದೆಂದು ನಾನು ಭಾವಿಸುತ್ತೇನೆ.

Mr. DEPUTY SPEAKER.—The House will now rise and meet again to-morrow at 1 P.M.

The House adjourned at Thirty Minutes past Twelve of the Clock to meet again at One of the Clock. On Monday, the 24th April 1961.

WD (587—GPB—500—(L.A. N w)—13 2-(7